# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಾಸರಹಳ್ಳಿ ವಲಯದ ವಾರ್ಡ್ ಸಮಿತಿ ಸಭೆಯನ್ನು ದಿನಾಂಕ: 05.04.2021 ರಂದು ಮಲ್ಲಸಂದ್ರ ವಾರ್ಡ್ ನಂ.13 ರಲ್ಲಿ ನಡೆಸಲಾದ ವಾರ್ಡ್ ಸಭೆ ನಡವಳಿಕೆಗಳು

ದಿನಾಂಕ: 05.04.2021 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ದಾಸರಹಳ್ಳಿ ವಲಯದ ಮಲ್ಲಸಂದ್ರ ವಾರ್ಡ್ ಸಂಖ್ಯೆ 13 ರ ಕಛೇರಿಯಲ್ಲಿ ವಾರ್ಡ್ ಸಭೆಯನ್ನು ನಡೆಸಲಾಗಿದೆ. ಸದರಿ ಸಭೆಯಲ್ಲಿ ನೋಡಲ್ ಅಧಿಕಾರಿಗಳಾದ ಡಾ.ಸುರೇಶ್.ಎಸ್‌ರವರು, ಸಹಾಯಕ ಅಭಿಯಂತರರು ಹಾಗೂ ಸದಸ್ಯ ಕಾರ್ಯದರ್ಶಿಗಳಾದ ಶ್ರೀ ವೆಂಕಟೇಶಪ್ಪರವರು, ಆರೋಗ್ಯ ಇಲಾಖೆಯ ಶ್ರೀ ಪಾರ್ಥರವರು, ಘನತ್ಯಾಜ್ಯ ನಿರ್ವಹಣೆಯ ಶ್ರೀ ಲೋಹಿತ್‌ಕುಮಾರ್, ವಿದ್ಯುತ್ ಉಪವಿಭಾಗದಿಂದ ಶ್ರೀ ಚೇತನ್ (ಬೀದಿ ದೀಪ ನಿರ್ವಹಣೆ) ಬೆಂಗಳೂರು ಜಲ ಮಂಡಳಿಯಿಂದ ಲೋಕನಾಥ, ಇನ್ಸ್‌ಪೆಕ್ಟರ್‌ರವರು, ತೋಟಗಾರಿಕಾ ಇಲಾಖೆಯಿಂದ ಶ್ರೀ ಶಿವಲಿಂಗೇಗೌಡ ರವರು, ಕಂದಾಯ ಇಲಾಖೆಯಿಂದ ಶ್ರೀ ರಾಜ್‌ಕುಮಾರ್‌ರವರು, ಆರ್.ಐ, ಸೀನಿಯರ್ ಹೆಲ್ತ್ ಇನ್ಸ್‌ಪೆಕ್ಟರ್ ಶ್ರೀ ಪಾರ್ಥರವರು, ವಾರ್ಡ್ ಸಮಿತಿ ಸದಸ್ಯರುಗಳಾದ ಶ್ರೀ ಪಶುಪತಿರವರು, ಶ್ರೀ ಗೋಪಾಲ್‌ರವರು, ಶ್ರೀ ಭೈಲಪ್ಪರವರು, ಶ್ರೀ ಅಶೋಕ್‌ರವರು ಹಾಗೂ ಸಾರ್ವಜನಿಕರು ಹಾಜರಿದ್ದರು.

**ಸದರಿ ಸಭೆಯಲ್ಲಿ ಈ ಕೆಳಕಂಡಂತೆ ನಿರ್ಣಯಗಳನ್ನು ತೀರ್ಮಾನಿಸಲಾಗಿದೆ.**

- **ವಿದ್ಯುತ್ ವಿಭಾಗಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ**

1. ಮಲ್ಲಸಂದ್ರ ಗ್ರಾಮ, ಮುನೇಶ್ವರ ಬ್ಲಾಕ್, ಕಲ್ಯಾಣನಗರ ವ್ಯಾಪ್ತಿಯಲ್ಲಿ ಬೀದಿ ದೀಪಗಳನ್ನು ತುರ್ತಾಗಿ ದುರಸ್ತಿಪಡಿಸಲು ಸೂಚಿಸಲಾಯಿತು.

- **ಕಂದಾಯ ಇಲಾಖೆಗೆ ಸಂಬಂಧಪಟ್ಟ ವಿಷಯಗಳ ಬಗ್ಗೆ**

ವಾರ್ಡ್ ನಂ. 13ರಲ್ಲಿ ಇರುವ ಮಲ್ಲಸಂದ್ರ ಕೆರೆಯ ಉಸ್ತುವರಿಯನ್ನು ಈಗಾಗಲೇ ಲೇಕ್ ಎ.ಇ.ಇ. ರವರು ಕೆರೆಯ ಬೌಂಡರಿಯನ್ನು ಮಾರ್ಕ್ ಮಾಡಿ ತೆರೆವುಗೋಳಿಸಲು ಸೂಚಿಸಿರುತ್ತಾರೆ. ಆದರೆ ವಾರ್ಡ್ ಸಮಿತಿಯ ಎಲ್ಲಾ ಸದಸ್ಯರು ಹಾಲಿ ಮಾಡಿರುವ ಮಾರ್ಕ್ ಸರಿ ಇಲ್ಲಾ ಅದ್ದರಿಂದ ಮತ್ತೊಮ್ಮೆ ಕೆರೆಯ ಸರ್ವೆ ಮಾಡಿ, ಗಡಿಯನ್ನು ಗುರುತಿಸಲು ಕೋರಿರುತ್ತಾರೆ. ಅದರಂತೆ ಕಂದಾಯ ಇಲಾಖೆಯ ಅಧಿಕಾರಿಗಳಿಗೆ ತುರ್ತಾಗಿ ಸರ್ವೆ ಮಾಡಿಸಿ ಕೆರೆಯ ಹದ್ದು ಬಸ್ತುನ್ನು ಫಿಕ್ಸ್ ಮಾಡಿಸಿಕೊಡಲು ಸಭೆಯಲ್ಲಿ ಸೂಚಿಸಲಾಯಿತು

- **ಆರೋಗ್ಯ ಇಲಾಖೆ ಹಾಗೂ ಘನತ್ಯಾಜ್ಯ ವಿಭಾಗಕ್ಕೆ ಸಂಬಂಧಪಟ್ಟ ವಿಷಯಗಳ ಬಗ್ಗೆ.**

ಆರೋಗ್ಯ ಇಲಾಖೆಯ ಶ್ರೀ ಪಾರ್ಥರವರು (ಹಿರಿಯ ಆರೋಗ್ಯ ಪರಿವೀಕ್ಷಕರು)

1. ವಾರ್ಡ್ 13ರ ಸಮಿತಿ ಸದಸ್ಯರಾದ ಶ್ರೀ ಬೈಲಪ್ಪರವರು ರವೀಂದ್ರನಗರ, 9ನೇ ಅಡ್ಡರಸ್ತೆಯಿಂದ 20ನೇ ಅಡ್ಡರಸ್ತೆವರೆಗೆ ಸರಿಯಾಗಿ ಕಸವನ್ನು ತೆಗೆಯುತ್ತಿಲ್ಲ ಎಂದು ಆಕ್ಷೇಪಿಸಿದರು ಉತ್ತರವಾಗಿ ಶ್ರೀ ಲೋಹಿತ್ ಕಿರಿಯ ಆರೋಗ್ಯ ಪರೀವಿಕ್ಷಕರು ರವರು ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

Scanned by CamScanner

2. ಕರ್ನಾಟಕ ಸರ್ಕಾರದ ನಿರ್ದೇಶನದಂತೆ ಪ್ರತಿ ದಿನ ಕೋವಿಡ್-19 ಟೆಸ್ಟ್ ಮಾಡಲಾಗುತ್ತಿದೆ. ಲಿಂಕ್ ವರ್ಕರ್ಸ್‌ಗಳು ಆಸ್ಪತ್ರೆಯಿಂದ ಮೆಡಿಕಲ್ ಕಿಟ್‌ಗಳನ್ನು ಪಡೆದು ರೋಗಿಗಳ ಸ್ಥಳಕ್ಕೆ ನೀಡುವ ಕೆಲಸ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಕ್ಯಾಂಪ್ ನಡೆಸುವ ಕಾರ್ಯವನ್ನು ಮಾಡುತ್ತಿದಾರೆ ಹಾಗು ವಾರದಲ್ಲಿ ಮೂರು ದಿವಸ ಹೋಮ್ ಕ್ವಾರೆಂಟೈನ್ ಆದವರನ್ನು ಬೇಟಿ ಮಾಡಿ ಯೋಗಕ್ಷೇಮ ವಿಚಾರಿಸುತ್ತಿದಾರೆ ಎಂದು ತಿಳಿಸಿದರು.

- **ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ಮಲ್ಲಸಂದ್ರ ರಸ್ತೆ ವಿಭಾಗ ಕಛೇರಿಗೆ ಸಂಬಂಧಪಟ್ಟ ವಿಷಯಗಳ ಬಗ್ಗೆ.**
- ಶ್ರೀ ಭೈಲಪ್ಪ ರವರು, ವಾರ್ಡ್ ಸಮಿತಿ ಸದಸ್ಯರು ರವೀಂದ್ರನಗರ 23ನೇ ಅಡ್ಡರಸ್ತೆ ಹಾಗೂ 9ನೇ ಅಡ್ಡರಸ್ತೆಗಳ ಕಾಂಕ್ರೀಟ್ ರಸ್ತೆಗಳು ಹಾಳಾಗಿದ್ದು ಕಾಂಕ್ರೀಟ್ ರಸ್ತೆಗಳನ್ನು ತುರ್ತಾಗಿ ನಿರ್ಮಿಸಲು ಸೂಚಿಸಿದರು.
- **ಬಿ.ಡ್ಲ್ಯೂ.ಎಸ್.ಎಸ್.ಬಿ ಇಲಾಖೆಗೆ ಸಂಬಂಧಪಟ್ಟ ವಿಷಯಗಳ ಬಗ್ಗೆ.**

ಹಾಲಿ ಮಲ್ಲಸಂದ್ರ ವಾರ್ಡ್‌ನಲ್ಲಿ ಹಲವಾರು ಕಡೆ ರಸ್ತೆಗಳನ್ನು ಅಗೆದು ಒಳಚರಂಡಿ ಮತ್ತು ಕಾವೇರಿ ಪೈಪ್‌ಗಳನ್ನು ಅಳವಡಿಸುವುದು ಕಂಡು ಬಂದಿದ್ದು, ಈ ಕಾಮಗಾರಿಗಳನ್ನು ನಿರ್ವಹಿಸುವ ಮೊದಲು ಯಾವ ರಸ್ತೆಗಳಲ್ಲಿ ಕಾಮಗಾರಿಯನ್ನು ನಿರ್ವಹಿಸಲಾಗುತ್ತಿದೆ ಎಂಬ ಬಗ್ಗೆ ವಾರ್ಡ್‌ನ ಬಿಬಿಎಂಪಿ ಇಂಜಿನಿಯರ್‌ವರಿಗೆ ಮಾಹಿತಿ ನೀಡಲು ಸೂಚಿಸಿ ಹಾಗೂ ಈ ಕಾಮಗಾರಿಗಳಿಗೆ ಸಂಬಂಧಿಸಿದ ಅಂದಾಜು ಪಟ್ಟಿಗಳು ಹಾಗೂ ನೀಡಿರುವ ಬಿಲ್ಲುಗಳ ವಿವರಗಳನ್ನು ವಾರ್ಡ್ ಸಮಿತಿಗೆ ಪ್ರತಿ ಸಭೆಗೆ ಸಲ್ಲಿಸಲು ಸೂಚಿಸಲಾಯಿತು. ಮತ್ತು ಹಾಲಿ ಬಿ.ಡ್ಲ್ಯೂ.ಎಸ್.ಎಸ್.ಬಿ ರವರು ರಸ್ತೆಗಳಲ್ಲಿ ಅಗೆದಿರುವ ಕಾಂಕ್ರೀಟ್/ಮಣ್ಣನ್ನು ತೆಗದು "Wetmix macdom" ಹಾಕಿ ಸಾರ್ವಜನಿಕರು ಒಡಾಡಲು ಅನುಕೂಲ ಮಾಡಿಕೊಡುವಂತೆ ಸೂಚಿಸಲಾಯಿತು

**ಇತರೆ ವಿಷಯಗಳು**

1. ವಾರ್ಡ್ ನಂ.13 ರ ಮಲ್ಲಸಂದ್ರದಲ್ಲಿ ಒಣಕಸವನ್ನು ಸಂಗ್ರಹಿಸಲು ತುರ್ತಾಗಿ ಒಣಕಸ ಕೇಂದ್ರವನ್ನು ತುರ್ತಾಗಿ ನಿರ್ಮಿಸಿಕೊಡಲು ಸಮಿತಿಯಲ್ಲಿ ಚರ್ಚಿಸಿ ಸಂಬಂಧಪಟ್ಟ ಇಲಾಖೆಯವರಿಗೆ ಸೂಚಿಸಲಾಯಿತು.

2. ಬಿ.ಹೆಚ್.ಇ.ಎಲ್. ಮಿನಿ ಕಾಲೋನಿ ಮುನೇಶ್ವರ ಬ್ಲಾಕ್, ಸಂತೋಷನಗರ, ಕಲ್ಯಾಣನಗರ, ಪ್ರಶಾಂತನಗರ, ಮಹೇಶ್ವರಿನಗರದ ನಿವಾಸಿಗಳಲ್ಲಿ ಕುಡಿಯುವ ನೀರನ್ನು ಸಮರ್ಪಕವಾಗಿ ಸರಬರಾಜು ಮಾಡುವ ಸಲುವಾಗಿ, ಮಲ್ಲಸಂದ್ರದ ಗುಟ್ಟೆ ವ್ಯಾಪ್ತಿಯಲ್ಲಿ ನೆಲಮಟ್ಟದ ನೀರು ಸಂಗ್ರಹಾಲಯವನ್ನು ನಿರ್ಮಿಸಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು. ಈ ವಿಷಯದ ಬಗ್ಗೆ ಈಗಾಗಲೇ ಸನ್ಮಾನ್ಯ ಶಾಸಕರು, ದಾಸರಹಳ್ಳಿ ವಿಧಾನಸಭಾ ಕ್ಷೇತ್ರ ರವರ ಗಮನಕ್ಕೆ ಕೂಡ ತರಲಾಗಿದೆ.

3. ಶ್ರೀ ಗೋಪಾಲ್ ರವರು, ವಾರ್ಡ್ ಸಮಿತಿ ಸದಸ್ಯರು ಮಾತನಾಡಿ ಇನ್ನೇನು ಮಳೆಗಾಲ ಹತ್ತಿರದಲ್ಲಿ ಇರುವುದರಿಂದ ಇನ್ನು ಹೆಚ್ಚಿನ ಲೇಬರ್‌ಗಳನ್ನು ವ್ಯವಸ್ಥೆ ಮಾಡಿ ಚರಂಡಿಯಲ್ಲಿನ ಹೂಳನ್ನು ತೆಗೆಯಲು ಗುತ್ತಿಗೆದಾರರಿಗೆ ಸೂಚಿಸಲು ಸಲ್ಲಿಸಿದರು. ಅದರಂತೆ ಇಂದಿನಿಂದ ಹೆಚ್ಚುವರಿ ಕೂಲಿ ಕಾರ್ಮಿಕರು ಹೂಳನ್ನು ತೆಗೆಯುತ್ತಿದ್ದಾರೆ ಎಂದು ಸಹಾಯಕ ಇಂಜಿನಿಯರ್ ತಿಳಿಸಿದರು.

Scanned by CamScanner

4. ಹಾಲಿ ಕರೋನಾ ಪ್ರಕರಣಗಳ ಸಂಖ್ಯೆಯ ಬಗ್ಗೆ ಸೀನಿಯರ್ ಹೆಲ್ತ್ ಇನ್ಸ್‌ಪೆಕ್ಟರ್ ಪಾರ್ಥರವರು ಮಾತನಾಡಿ ಈ ಕೆಳಕಂಡಂತೆ ಅಂಕಿ ಅಂಶಗಳನ್ನು ನೀಡಿರುತ್ತಾರೆ.

| | |
|---|---|
| ವಾರ್ಡ್ ವ್ಯಾಪ್ತಿಯಲ್ಲಿ ಒಟ್ಟು ರೋಗಿಗಳ ಸಂಖ್ಯೆ: | 1284 |
| ವಾರ್ಡ್ ವ್ಯಾಪ್ತಿಯಲ್ಲಿ ಒಟ್ಟು ಡಿಸ್ಚಾರ್ಜ್ ರೋಗಿಗಳ ಸಂಖ್ಯೆ: | 1240 |
| ವಾರ್ಡ್ ವ್ಯಾಪ್ತಿಯಲ್ಲಿ ಒಟ್ಟು ಇಲ್ಲಿಯವರೆಗೆ ಸತ್ತವರ ಸಂಖ್ಯೆ: | 12 |
| ವಾರ್ಡ್ ವ್ಯಾಪ್ತಿಯಲ್ಲಿ ಒಟ್ಟು ಹಾಲಿ ಪ್ರಕರಣಗಳ ಸಂಖ್ಯೆ: | 33 |

ಸದ್ಯದ ಪರಿಸ್ಥಿತಿಯಲ್ಲಿ ಕರೋನಾ ಪ್ರಕರಣಗಳು ಹೆಚ್ಚಾಗದಂತೆ ತಡೆಯಲು ಬಿ.ಡಬ್ಲ್ಯೂ.ಎಸ್.ಎಸ್.ಬಿ ಕಛೇರಿ ವತಿಯಿಂದ ಜೆಟ್ ಮೇಷಿನ್‌ನನ್ನು ಆರೋಗ್ಯ ಇಲಾಖೆ ವಶಕ್ಕೆ ಪಡೆದುಕೊಂಡು ಮೆಡಿಷನ್ ಸ್ಪ್ರೇಯಿಂಗ್ ಮಾಡಲು ವ್ಯವಸ್ಥೆ ಮಾಡಲು ಸೂಚಿಸಲಾಯಿತು.

5. ಶ್ರೀ ಅಶೋಕ್‌ರವರು, ವಾರ್ಡ್ ಸಮಿತಿ ಸದಸ್ಯರು ಮಾತನಾಡಿ ಪೈಪ್‌ಲೈನ್ ಮುಖ್ಯರಸ್ತೆಯಲ್ಲಿ ನೀರು ಸರಬರಾಜು ಮಾಡುವ ವಾಟರ್‌ಮನ್‌ಗಳು ವಾಣಿಜ್ಯ ಕಟ್ಟಡಗಳಿಗೆ ಹೆಚ್ಚುವರಿ ನೀರನ್ನು ಸರಬರಾಜು ಮಾಡುತ್ತಿದ್ದು, ಇದರಿಂದ ಪೈಪ್‌ಲೈನ್ ಮುಖ್ಯರಸ್ತೆಯ ಹಾಜುಬಾಜಿನಲ್ಲಿ ವಾಸಿಸುತ್ತಿರುವ ಜನಗಳಿಗೆ ನೀರು ಸಿಗದೇ ತುಂಬಾ ತೊಂದರೆಯಾಗುತ್ತದೆ ಎಂದು ತಿಳಿಸಿ ಸರಿಪಡಿಸಲು ಸೂಚಿಸಿದರು.

6. ಶ್ರೀ ಅಶೋಕ್ ರವರು ವಾರ್ಡ್ ಸಮಿತಿ ಸದಸ್ಯರು ಮಾತನಾಡಿ ಕಲ್ಯಾಣನಗರ ಕೃಷ್ಣ ಬೇಕರಿ ಹಿಂಭಾಗ ಕೊಳವೆ ಬಾವಿಯಲ್ಲಿ ನೀರು ಅಲ್ಪ ಪ್ರಮಾಣದಲ್ಲಿ ಬರುತ್ತಿದ್ದು, ಕೊಳವೆ ಬಾವಿಯಲ್ಲಿ ನೀರು ಇರುವ ಬಗ್ಗೆ ಖಾತ್ರಿ ಪಡಿಸಿಕೊಂಡು ಹೊಸದಾಗಿ ಹೆಚ್ಚುವರಿ ಜಿ.ಐ. ಪೈಪುಗಳನ್ನು ಅಳವಡಿಸಲು ಬಿ.ಡಬ್ಲ್ಯೂ.ಎಸ್.ಎಸ್.ಬ್ಯ ಸಹಾಯಕ ಅಭಿಯಂತರರಿಗೆ ಸೂಚಿಸಲಾಯಿತು.

05/04/2021

ನೋಡಲ್ ಅಧಿಕಾರಿಗಳು ಹಾಗೂ ಅಧ್ಯಕ್ಷರು,
ವಾರ್ಡ್ ಸಂಖ್ಯೆ.13 ಮಲ್ಲಸಂದ್ರ

ಸಹಾಯಕ ಅಭಿಯಂತರರು ಹಾಗೂ ಸದಸ್ಯ ಕಾರ್ಯದರ್ಶಿ
ವಾರ್ಡ್ ಸಂಖ್ಯೆ.13, ಮಲ್ಲಸಂದ್ರ

ಪ್ರತಿಯನ್ನು:-

1. ಮಾನ್ಯ ಆಯುಕ್ತರು, ಬಿಬಿಎಂಪಿ ನರಸಿಂಹರಾಜ ಚೌಕ ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
2. ಅಧ್ಯಕ್ಷರು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
3. ಮಾನ್ಯ ಜಂಟಿ ಆಯುಕ್ತರು, ದಾಸರಹಳ್ಳಿ ವಲಯ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
4. ಕಾರ್ಯಪಾಲಕ ಅಭಿಯಂತರರು, ದಾಸರಹಳ್ಳಿ ವಿಭಾಗ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
5. ಕಾರ್ಯಪಾಲಕ ಅಭಿಯಂತರರು, (ಯೋಜನಾ ವಿಭಾಗ) ದಾಸರಹಳ್ಳಿ ವಿಭಾಗ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
6. ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ, ದಾಸರಹಳ್ಳಿ ವಿಭಾಗ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
7. ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ ದಾಸರಹಳ್ಳಿ ವಿಭಾಗ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.

Scanned by CamScanner

8. ಕಾರ್ಯಪಾಲಕ ಅಭಿಯಂತರರು, ಎಸ್.ಡಬ್ಲ್ಯೂ.ಎಂ. ದಾಸರಹಳ್ಳಿ ವಿಭಾಗ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
9. ಕಲ್ಯಾಣಾಧಿಕಾರಿಗಳು, ದಾಸರಹಳ್ಳಿ ವಿಭಾಗ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
10. ಸಹಾಯಕ ನಿರ್ದೇಶಕರು, (ಪಶುಪಾಲನೆ) ದಾಸರಹಳ್ಳಿ ವಲಯ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
11. ಸಹ ಕಂದಾಯ ಅಧಿಕಾರಿ, ಮಲ್ಲಸಂದ್ರ ಉಪವಿಭಾಗ, ದಾಸರಹಳ್ಳಿ ವಿಭಾಗ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.

Scanned by CamScanner